ಮದುವೆಯಾದ ನಟಿ ದೀಪಿಕಾ ಪಡುಕೋಣೆ ಕೂಡ ಒಂದೆಳೆ ಕರಿಮಣಿಗೆ ಚಿಕ್ಕ ವಜ್ರದ ಪೆಂಡೆಂಟ್ ಹಾಕಿಕೊಂಡು ಮಿಂಚಿದ್ದರು.

**ಕರಿಮಣಿಯಲ್ಲಿ ಬದಲಾವಣೆ**

ಬಗೆ ಬಗೆಯ ವಿನ್ಯಾಸದ ಆಭರಣ ಧರಿಸಿದ ಹೆಣ್ಣಿನ ಕುತ್ತಿಗೆಯಲ್ಲಿ ಕರಿಮಣಿ ಸರವಿದ್ದರೆ ಆಕೆಗೊಂದು ಭೂಷಣ ಎನ್ನಬಹುದು. ಈ ಕರಿಮಣಿ ಸರವನ್ನು ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯಲ್ಲಿ ಕರೆಯುತ್ತಾರೆ. ಹಾಗೇ, ಒಂದೊಂದು ಕಡೆ ಒಂದೊಂದು ರೀತಿ ವಿನ್ಯಾಸ ಕೂಡ ಇರುತ್ತದೆ. ಕೆಲವರು ಮಾಂಗಲ್ಯ ಸರವೆಂದು ಕರೆದರೆ ಇನ್ನು ಕೆಲವರು ತಾಳಿ ಸರ, ಕಂಠಿ, ಮಂಗಲಸೂತ್ರ ಎಂದು ಕರೆಯುತ್ತಾರೆ. ಹೆಚ್ಚಾಗಿ ಇನ್ನು ಕೇರಳದಲ್ಲಿ ಕೆಲವರು ಇದನ್ನು ಮಿನ್ನು ಎಂದು ಕರೆಯುತ್ತಾರೆ. ಹಾಗೇ ಆಂಧ್ರಪ್ರದೇಶದಲ್ಲಿ ಬೊಟ್ಟು ಎಂದು ಕರೆಯುತ್ತಾರೆ.

ಈ ಕರಿಮಣಿ ಸರವು ಕೆಲವೊಂದು ಪ್ರದೇಶದಲ್ಲಿ ಮತಪಂಥಗಳಿಗನುಗುಣವಾಗಿ ಸ್ವಲ್ಪ ವ್ಯತ್ಯಾಸಗಳು ಇವೆ. ಬ್ರಾಹ್ಮಣರಲ್ಲಿ ತಾಯಿ ಮನೆ ಕಡೆಯಿಂದ ಒಂದು ತಾಳಿ ಹಾಗೇ ಗಂಡನ ಮನೆಯ ಕಡೆಯಿಂದ ಒಂದು ತಾಳಿ ಎಂಬ ಸಂಪ್ರದಾಯವಿದೆ. ಹಾಗೇ ವೈಶ್ಯ ಹಾಗೂ ಚಿನಿವಾರರಲ್ಲಿ ಹೆಚ್ಚಾಗಿ ಚಿನ್ನ, ವಜ್ರದ ತಾಳಿಗೆ ಪ್ರಾಶಸ್ತ್ಯವಿದೆ. ವೀರಶೈವರಲ್ಲಿ ತಾಳಿಯೊಂದಿಗೆ ಲಿಂಗದ ಕರಂಡಕವನ್ನು ಕಟ್ಟಿಕೊಳ್ಳುತ್ತಾರೆ. ಆದರೆ ಈಗ ಕಾಲ ಬದಲಾಗಿದೆ. ಹೆಣ್ಣು ಫ್ಯಾಷನ್ ಜಗತ್ತಿಗೆ ಮುಖ ಮಾಡಿದ್ದಾಳೆ.

ಇಂದು ಈ ಕರಿಮಣಿ ಸರದಲ್ಲಿ ಹಲವಾರು ಮಾರ್ಪಾಡುಗಳಾಗಿವೆ. ಫ್ಯಾಷನ್ ಲೋಕದ ಗಾಳಿ ಮಾಂಗಲ್ಯ ಸರಕ್ಕೂ ತಾಕಿದೆ. ಆಗಾಗ ಕರಿಮಣಿ ಸರವನ್ನು ಬದಲಾಯಿಸುವುದು ತಪ್ಪು, ತಾಳಿಯನ್ನು ಬದಲಾಯಿಸಬಾರದು, ಕುತ್ತಿಗೆ ಬಿಟ್ಟು ಬೇರೆ ಎಲ್ಲೂ ಅದನ್ನ ಧರಿಸಬಾರದು ಹೀಗೆ ಏನೆಲ್ಲಾ ವಿರೋಧಾಭಾಸಗಳಿದ್ದರೂ ಕರಿಮಣಿ ಸರ ಫ್ಯಾಷನೆಬಲ್ ಆಗಿ ಮಹಿಳಾಮಣಿಗಳನ್ನು ಸೆಳೆಯುತ್ತಿದೆ ಎಂದರೆ ತಪ್ಪಾಗಲಾರದು.

ಸಿನಿಮಾ, ನಟಿಯರು, ರೂಪದರ್ಶಿಗಳು ಈ ಮಾಂಗಲ್ಯ ಸೂತ್ರದ ಮಾರ್ಪಾಡುಗಳಿಗೆ ರೂವಾರಿಗಳು. ತಮ್ಮ ನೆಚ್ಚಿನ ನಟಿಮಣಿಯರು ಧರಿಸಿದ ಉಡುಪು, ಚಪ್ಪಲಿ, ಮೇಕಪ್‌ಗಳಂತೆ ಅವರು ಧರಿಸಿರುವ ಕರಿಮಣಿಯನ್ನೂ, ಅದರ ವಿನ್ಯಾಸವನ್ನು ಕಣ್ಣಿನಲ್ಲಿ ಸೆರೆಯಾಗಿಸಿಕೊಂಡು ಅದೇ ವಿನ್ಯಾಸದ ತಾಳಿ ಸರವನ್ನು ತಾವು ತೊಟ್ಟು ಸಂಭ್ರಮಿಸುವುದು ಈಗಿನವರ ಕ್ರೇಜ್. ಇದು ಈಗಿನ ಟ್ರೆಂಡ್ ಕೂಡ!

ಅದು ಅಲ್ಲದೇ, ಉದ್ಯೋಗಸ್ಥ ಹೆಣ್ಣುಮಕ್ಕಳು ಮೊದಲಿನವರಂತೆ ಉದ್ದನೆಯ, ದಪ್ಪನೆಯ ತಾಳಿಸರವನ್ನು ದಿನನಿತ್ಯ ಬಳಸುವುದಕ್ಕೆ ಅಷ್ಟಾಗಿ ಆಸಕ್ತಿ ವಹಿಸುತ್ತಿಲ್ಲ. ಹೊಕ್ಕಳಿಗೆ ತಾಕುವ ನಾಲ್ಕು ತೊಲೆ, ಐದು ತೊಲೆಯ ದಪ್ಪನೆಯ ಕರಿಮಣಿ ಸರವನ್ನು ಸಂಭಾಳಿಸುವುದು ಕೂಡ ತುಸು ಕಷ್ಟದ ಕೆಲಸವೇ. ಏಕೆಂದರೆ ಕೈಗೆ ಸಿಕ್ಕುವುದರಿಂದ ಇದು ತುಂಡಾಗುವ ಸಾಧ್ಯತೆ ಹೆಚ್ಚು. ಅದೂ ಅಲ್ಲದೆ ಈಗ ಸರಗಳ್ಳರ ಹಾವಳಿಯಿಂದ ತಪ್ಪಿಸಿಕೊಳ್ಳುವುದಕ್ಕಾಗಿಯೂ ಗಿಡ್ಡ ಅಥವಾ ಸಣ್ಣ ಕರಿಮಣಿಯ ಮೊರೆ ಹೋಗುತ್ತಿದ್ದಾರೆ ಹೆಂಗಳೆಯರು. ದಿನನಿತ್ಯ ಬಳಕೆಗೆ ಅನುಕೂಲಕರವಾಗಿ ಆದಷ್ಟು ಚಿಕ್ಕದಾಗಿ ಸಿಂಪಲ್ಲಾಗಿದ್ದರೆ ಸಾಕು ಎನ್ನುವುದು ಹೆಂಗಳೆಯರ ಅಭಿಪ್ರಾಯ.

**ತಾಳಿ ಜಾಗಕ್ಕೆ ಬಂದ ಪೆಂಡೆಂಟ್**

ದಕ್ಷಿಣ ಕನ್ನಡ, ಉತ್ತರ ಕನ್ನಡ ಕಡೆಯಲ್ಲಿ ಹೆಚ್ಚಾಗಿ ಚಿನ್ನದ ಎಳೆಗಳ ಮಧ್ಯೆ ಜೀರೊ ಬೀಡ್ಸ್ ಕಪ್ಪು ಮಣಿಗಳನ್ನು ಪೋಣಿಸಿ ಮಧ್ಯೆ ತಾಳಿ ಬೊಟ್ಟು ಇರುತ್ತದೆ. ಕೆಲವು ಕಡೆ ಬಂಗಾರದ ಚೈನ್‌ನ ಮಧ್ಯೆ ತಾಳಿ ಬೊಟ್ಟು ಇರುತ್ತದೆ. ಇನ್ನು ತಮಿಳುನಾಡು ಕಡೆ ಚಿನ್ನದ ಸರದ ಮಧ್ಯೆ ದಪ್ಪನೆಯ ಗಾತ್ರದ ದೇವರ ವಿಗ್ರಹದಂತೆ ಇರುವ ತಾಳಿ ಇರುತ್ತದೆ. ಆದರೆ ಈಗ ತಾಳಿ ಜಾಗದಲ್ಲಿ ಪೆಂಡೆಂಟ್ ಬಂದು ಕೂತಿದೆ. ಈ ಪೆಂಡೆಂಟ್‌ನಲ್ಲಿ ನಾನಾ ವಿನ್ಯಾಸಗಳ ಜತೆಗೆ ಗಂಡನ ಹೆಸರಿನ ಪೆಂಡೆಂಟ್ ಧರಿಸುವುದು ಈಗ ಫ್ಯಾಷನ್ ಆಗಿಬಿಟ್ಟಿದೆ.

ಮೊದಲೆಲ್ಲಾ ಒಂದು ಕರಿಮಣಿ ಇರುತ್ತಿತ್ತು. ಈಗ ಮದುವೆ ಫಂಕ್ಷನ್‌ಗೆ ಹೋಗುವುದಕ್ಕೆ ಉದ್ದನೆಯ ಕರಿಮಣಿ ರಾತ್ರಿ ರಿಸೆಪ್ಷನ್‌ಗೆ ಡೈಮೆಂಡ್ ಪೆಂಡೆಂಟ್ ಇರುವ ಒಂದು ಅಥವಾ ಎರಡಳೆಯ ಮಧ್ಯಮ ಗಾತ್ರದ ಕರಿಮಣಿ ಸರ ಹಾಗೇ ದಿನ ನಿತ್ಯದ ಉಪಯೋಗಕ್ಕಾಗಿ ಸಣ್ಣ ಕರಿಮಣಿ ಎಂಬಂತೆ ಮಾರ್ಪಾಡುಗಳಾಗಿವೆ. ಸಣ್ಣ ಪುಟ್ಟ ಸಮಾರಂಭಗಳಿಗೆ ಹೋಗುವಾಗ ಸಿಂಪಲ್ ಆಭರಣಗೊಂದಿಗೆ ಸಣ್ಣ ಕರಿಮಣಿ ಇದ್ದರೆ ಚೆಂದ ಹಾಗೇ ಮದುವೆ ಮುಂಜಿಯಂಥ ಕಾರ್ಯಕ್ರಮಗಳಿಗೆ ಹೋಗುವ ದೊಡ್ಡ ಕರಿಮಣಿ ಸರ ಧರಿಸುವುದು ಇತ್ತೀಚೆಗೆ ಫ್ಯಾಷನ್ ಆಗಿದೆ.

ವೆಸ್ಟರ್ನ್ ಔಟ್ ಫಿಟ್‌ಗೆ ಸರಿಹೊಂದುವಂತೆ ಜೀರೊ ಸೈಜ್‌ಗಿಂತಲೂ ಚಿಕ್ಕದಾಗಿರುವ ಇರುವ ಕಪ್ಪು ಮಣಿಗಳನ್ನು ಸಪೂರ ಎಳೆಯ ಚಿನ್ನದ ದಾರಕ್ಕೆ ಪೋಣಿಸಿದ ಕರಿಮಣಿ ಸರವನ್ನು ಇಷ್ಟಪಡುತ್ತಾರೆ. ಹಾಗೇ ಕುಂದನ್ ಪದಕ, ಚಿಕ್ಕ ವಜ್ರದ ಪೆಡೆಂಟ್, ಹೂವಿನ ವಿನ್ಯಾಸ, ನವಿಲಿನ ವಿನ್ಯಾಸವಿರುವ ಬಗೆ ಬಗೆಯ ಪೆಡೆಂಟ್‌ಗಳು ಮಾರುಕಟ್ಟೆಯಲ್ಲಿದೆ. ಉಂಗುರ ಬಳೆ ನೆಕ್ಲೇಸುಗಳಂತೆ ಕರಿಮಣಿ ಸರವೂ ಡಿಫರೆಂಟ್ ಆಗಿರಲಿ ಎಂಬುದು ಹೆಂಗಳೆಯರ ಆಸೆ. ■



ಚಿತ್ರ: ಕೃಷ್ಣವೇಣಿ ಪ್ರಸಾದ್ ಮುಳಿಯ